ಲೋಕಾಯುಕ್ತ ಹಾಗೂ ಉಪ-ಲೋಕಾಯುಕ್ತರ ಖರ್ಚು

೯೮೦. ಶ್ರೀ ಕೆ. ಬಿ. ಕೋಳಿವಾಡ (ರಾಣೆ ಬೆನ್ನೂರು) — ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಲೋಕಾಯುಕ್ತ ಹಾಗೂ ಉಪ-ಲೋಕಾಯುಕ್ತ ಸ್ಥಾಪನೆಯಾದಾಗಿನಿಂದ ಇಲ್ಲಿಯವರೆಗೆ ಆದ ವೆಚ್ಚವೆಷ್ಟು ?

ಆ) ಎಷ್ಟು ಪ್ರಕರಣಗಳು ಇದುವರೆವಿಗೂ ವಿಲೇವಾರಿಯಾಗಿದೆ ಮತ್ತು ಎಷ್ಟು ನಿರ್ಣಯವಾಗದೆ ಬಾಕಿ ಉಳಿದಿದೆ ?

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯ ಮಂತ್ರಿಗಳು)—

ಅ) ರೂ. ೨,೩೧,೬೨,೧೩೧-೩೩
(ದಿನಾಂಕ ೧೫-೧-೧೯೮೬ ರಿಂದ ೩೧-೧೨-೧೯೮೭ರ ವರೆಗೆ ಸಿಬ್ಬಂದಿ ವೆಚ್ಚ ಸೇರಿದಂತೆ)

ಆ) ೧) ೭೭ ಪ್ರಕರಣಗಳು ವಿಲೇವಾರಿಯಾಗಿದೆ,

೨) ೧೦೪ ಪ್ರಕರಣಗಳು ತನಿಖೆಯಲ್ಲಿವೆ.

ಬೈಂದೂರಿನಿಂದ ಬೆಂಗಳೂರಿಗೆ ಸುವಿಹಾರಿ ಬಸ್ ವಿಶೇಷ ಏರ್ಪಾಡು ಮಾಡುವುದು

೨೨೭. ಶ್ರೀ ಜಿ. ಎಸ್. ಆಚಾರ್ (ಬೈಂದೂರು)—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೈಂದೂರಿನಿಂದ ಬೆಂಗಳೂರಿಗೆ ಕುಂದಾಪುರ-ಶಿವಮೊಗ್ಗ ಮಾರ್ಗವಾಗಿ 'ಸುವಿಹಾರಿ' ಬಸ್ ವ್ಯವಸ್ಥೆ ವಿಶೇಷವಾಗಿ ಏರ್ಪಡಿಸಲು ಸಾರ್ವಜನಿಕರ ಬೇಡಿಕೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ವ್ಯವಸ್ಥೆಯನ್ನು ಯಾವಾಗ ಪ್ರಾರಂಭಿಸಲಾಗುವುದು.

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಾರಿಗೆ ಸಚಿವರು)—

ಅ) ಮತ್ತು ಆ) ಕ.ರಾ.ರ.ಸಾ.ಸಂಸ್ಥೆಯು ಮಂಗಳೂರಿನ ಮೂಲಕ ಬೆಂಗಳೂರು ಕುಂದಾಪುರಗಳ ನಡುವೆ ಓಡಿಸುತ್ತಿರುವ ಸುವಿಹಾರಿ ಸಾರಿಗೆಯು ಜನಪ್ರಿಯವಾಗಿದೆ. ಹಾಲಾಡಿ ಅಥವಾ ಹುಲಿಕಲ್ಲಿನಿಂದ ಸುವಿಹಾರಿ ಬಸ್ಸಿನಲ್ಲಿ ಪ್ರಯಾಣ ಮಾಡ ಬಯಸುವ ಪ್ರಯಾಣಿಕರು ಈ ಕುಂದಾಪುರ ಬೆಂಗಳೂರು ಬಸ್ಸಿನ ಸೌಲಭ್ಯವನ್ನು ಪಡೆಯಬಹುದು. ಹೊಸನಗರದ ಮೂಲಕವಾಗಿ ಬೆಂಗಳೂರು ಕುಂದಾಪುರಗಳ ನಡುವೆ ಅರೆ-ಸುಖಾಸೀನ ವಾಹನವನ್ನು ಓಡಿಸಲಾಗುತ್ತಿದ್ದು ಇದನ್ನೂ ಸಹ ಉಪಯೋಗಿಸಿಕೊಳ್ಳಬಹುದು.

ಮದ್ಯದಂಗಡಿ ಬಾರ್ ಮತ್ತು ರೆಸ್ಟೋರೆಂಟ್‌ಗಳ ಬಗ್ಗೆ

೧೦೧೧. ಶ್ರೀ ಬಿ. ಗುರುಪ್ರಸಾದ್ (ನೆಲಮಂಗಲ)—ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ ೩ ವರ್ಷಗಳಲ್ಲಿ ಅಬಕಾರಿ ಇಲಾಖಾ ಮತಿಯಿಂದ ಮಂಜೂರಾದ ಮದ್ಯದಂಗಡಿ ಬಾರ್ ಮತ್ತು ರೆಸ್ಟೋರೆಂಟ್‌ಗಳ ಸಂಖ್ಯೆ ಎಷ್ಟು ?

ಆ) ಮದ್ಯದಂಗಡಿ, ಬಾರ್ ಮತ್ತು ರೆಸ್ಟೋರೆಂಟ್‌ಗಳನ್ನು ಪ್ರಾರಂಭಿಸಲು ಅನುಸರಿಸಬೇಕಾದ ನೀತಿ ನಿಯಮಗಳೇನು ಹಾಗೂ ಯಾವ ಆಧಾರದ ಮೇಲೆ ಇದುವರೆಗೆ ಮಂಜೂರು ಮಾಡಲಾಗಿದೆ ?

ಇ) ಅಬಕಾರಿ ಸುಂಕವನ್ನು ವಸೂಲಿ ಮಾಡಲು ಅಬಕಾರಿ ನಿರೀಕ್ಷಕರುಗಳಿಗೆ ನಿರ್ದಿಷ್ಟ ಗುರಿಯೇನಾದರೂ ನಿಗದಿಗೊಳಿಸಲಾಗಿದೆಯೇ

ಶ್ರೀ ಡಿ. ಬಿ. ಇನಾಂದಾರ್ (ರಾಜ್ಯ ಅಬಕಾರಿ ಸಚಿವರು)—

ಅ)

ವರ್ಷ	ವಂದ್ಯದಂಗಡಿ	ಬಾರ್
೧೯೮೪–೮೫	೨೮೨೫	೧೧೫೨
೧೯೮೫–೮೬	೨೯೩೦	೧೪೩೭
೧೯೮೬–೮೭	೩೧೬೭	೧೮೮೨

ಆ) ಕರ್ನಾಟಕ ಅಬಕಾರಿ(ದೇಶಿ ಮತ್ತು ವಿದೇಶಿ ವಂದ್ಯ ಮಾರಾಟ)ನಿಯಮ ೧೯೬೮, ವಂದ್ಯದ ಅಂಗಡಿಗಳಿಗೆ ಪರವಾನಗಿಯನ್ನು ಜನಸಂಖ್ಯೆ ಮತ್ತು ಬೇಡಿಕೆಯ ಮೇರೆಗೆ ನಿಗದಿಗೊಳಿಸಲಾಗಿರುವ ಪ್ರಮಾಣದ ಪ್ರಕಾರ ಕೊಡಲಾಗುವುದು.

ಇ) ಇಲ್ಲ. ಆದರೆ ಅವರು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಸುಂಕವನ್ನು ವಸೂಲಿ ಮಾಡಲು ಜವಾಬ್ದಾರರಾಗಿರುತ್ತಾರೆ.

ನಂಜನಗೂಡು ತಾಲ್ಲೂಕು ನ್ಯಾಯ ಬೆಲೆ ಅಂಗಡಿಗಳ ಬಗ್ಗೆ

೫೬೭. ಶ್ರೀ ಡಿ. ಟಿ. ಜಯಕುಮಾರ್ (ನಂಜನಗೂಡು)—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ನಂಜನಗೂಡಿನ ತಾಲೋಕಿನಲ್ಲಿರುವ ಒಟ್ಟು ನ್ಯಾಯ ಬೆಲೆ ಅಂಗಡಿಗಳ ಸಂಖ್ಯೆ ಎಷ್ಟು ?

ಆ) ಇವುಗಳಲ್ಲಿ ವಿ.ಎಸ್.ಎಸ್.ಎನ್‌ಗೆ ಎಷ್ಟು ಹಾಗೂ ಉಳಿದವು ಎಷ್ಟು ?

ಇ) ಈ ನ್ಯಾಯ ಬೆಲೆ ಅಂಗಡಿಗಳು ಕ್ರಮಬದ್ಧವಾಗಿ ಆಹಾರ ವಿತರಣೆ ನಡೆಸುತ್ತಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಈ) ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಬಸವರಾಜ ಪಾಟೀಲ ಅನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು)—

ಅ) ೧೦೧

ಆ) ವಿ. ಎಸ್. ಎಸ್. ಎನ್. ೧೫
ಉಳಿದವು ೮೬

ಇ) ಬಂದಿದೆ.

ಈ) ನಂಜನಗೂಡು ಕೋ–ಆಪರೇಟೀವ್ ಕ್ರೆಡಿಟ್ ಸೊಸೈಟಿ(ರಿ)ಅನ್ನು ತನಿಖೆ ನಡೆಸಿ, ಜಿಲ್ಲಾಧಿಕಾರಿಯವರ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿ ಈ ಬಾರಿ ಎಚ್ಚರಿಕೆ ಕೊಡಲಾಗಿದೆ.

ಹುಲ್ಲಹಳ್ಳಿಯಲ್ಲಿರುವ ವಿ.ಎಸ್.ಎಸ್.ಎನ್. ಸಂಘವು ಪಡಿತರ ಸಾಮಗ್ರಿಗಳ ವಿತರಣೆಯಲ್ಲಿ ಅಕ್ರಮ ವ್ಯವಹಾರದಲ್ಲಿ ತೊಡಗಿದ್ದ ಆರೋಪಗಳ ಮೇಲೆ ಈ ಹಿಂದೆ ಜಿಲ್ಲಾಧಿಕಾರಿಯವರು (ಆಹಾರ) ಮೈಸೂರುರವರ ವ್ಯಾಪ್ತಿಯಲ್ಲಿದ್ದಾಗ ಸದರಿ ಸಂಘಕ್ಕೆ ನ್ಯಾಯ ಬೆಲೆ ಅಂಗಡಿಯನ್ನು ನಡೆಸಲು ನೀಡಿದ್ದ ಪರವಾನಗಿಯನ್ನು ಅಮಾನತ್ತುಗೊಳಿಸಿ, ಬದಲಿ ವ್ಯವಸ್ಥೆಯನ್ನು ಸಹ ಮಾಡಿರುತ್ತಾರೆ. ದಿನಾಂಕ ೧–೪–೧೯೮೭ರ ನಂತರ ಕಡತ ಜಿಲ್ಲಾ ಪರಿಷತ್ ಕಛೇರಿಗೆ ವರ್ಗಾವಣೆಯಾದ ಮೇಲೆ ಸದರಿ ವಿ.ಎಸ್.ಎಸ್.ಎನ್.ಗೆ ಕಾರಣ ಕೇಳುವ ನೋಟೀಸನ್ನು ಕೊಟ್ಟಿರುತ್ತೆ. ವಿಚಾರಣೆ ನಡೆಸಿ ಕಾನೂನಿನಂತೆ ಕ್ರಮ ಕೈಗೊಳ್ಳಲಾಗುವುದು.